

5
ಮರಗಳಾಚೆಗೆ, ಹುಲ್ಲುಗಾವಲಿನ ಆಚೆಗೆ
ಬೆಟ್ಟದಡಿಯಲ್ಲಿರುವ ಕೆರೆಯ ಬಳಿಗೆ,
ಮಬ್ಬಿನಲ್ಲೊಂದು ಮನೆ, ಇದ್ದಂತೆ ಕಾಣುವದು.
ಅರಣ್ಯಾನಿ, ಯಾರಿಹರು ಅಲ್ಲಿ ಒಳಗೆ?

6
ಈಗ ಸಂಧ್ಯಾಕಾಲವಿರಬೇಕು. ಇಲ್ಲೊಂದು
ಹಕ್ಕಿ ಮರಳಿದೆ ಗೂಡಿಗೀಗ ತಾನೆ,
ಗಾಲಿಗಳು ಕಿರುಗುಟ್ಟಿ, ಬಂಡಿ ಹೊರಟಿದೆ
ಅರಣ್ಯಾನಿ, ಈ ಸಪ್ಪಳವು ನಿನ್ನದೇನೆ?

7
ಇದ್ದಕ್ಕಿದ್ದಂತೆ ದನಿ, 'ನಂದಿನಿ, ನಂದಿನಿ'
ಇಲ್ಲೊಬ್ಬ ಕರೆದಿಹನು ಹಸುವ ಕೂಗಿ,
ಕಣಿವೆಯಲಿ ಸಂಜೆ ಕರಗುವ ಮುನ್ನ, ಅರಣ್ಯಾನಿ,
ಸೇರಬೇಕಲ್ಲವೆ ಮನೆಗೆ ಹೋಗಿ.

8
ಕಾಡಿನಲ್ಲಿದ್ದ ಒಬ್ಬೊಬ್ಬನೂ ಅನ್ನುವನು
ಈಗ ಏನೊ ಸದ್ದು, ಕೇಳಿತಿಲ್ಲಿ
ಅಂದುಕೊಳ್ಳುತ್ತಲೆ, ''ಇಲ್ಲೆಲ್ಲೊ ಅರಣ್ಯಾನಿ,
ಹಾದುಹೋಗುತ್ತಾಳೆ ಸನಿಹದಲ್ಲಿ.

9
ಅವಳ ಬಳಿ, ತೀರ ಹತ್ತಿರ ಹೋಗದಿದ್ದರೆ,
ಯಾರಿಗೂ ಏನೂ ಮಾಡುವವಳಲ್ಲ,
ಸಿಂಹಗಳ ತಾಯಿ, ಮೃಗಗಳ ತಾಯಿ,
ಇವಳೇ; ಜಿಂಕೆಗಳಿಗೂ ತಾಯಿ ಇವಳೆ ಅಲ್ಲ!''

10
ಇವಳನ್ನು ಸ್ತುತಿಸುವೆನು, ಇವಳ ನಿಶ್ಶಬ್ದಕ್ಕೆ,
ಇವಳವಚಿಕೊಂಡಿದ್ದ ಸದ್ದುಗಳಿಗೆ,
ತನ್ನ ಒಲವಿನ ಸೆರಗಿನಲ್ಲಿಟ್ಟು, ಸಲುಹಿದ್ದ,
ಬೆಡಗುಗಳಿಗೂ, ಈಗ, — ಒಂದು ಗಳಿಗೆ.

●

